ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ ಕೃಷಿ ಇಲಾಖೆ

ಆರ್‌ಡಿಸಿ-ಇಜಿಎಸ್/ 873/2022 ದಿನಾಂಕ:14-11-2022

# ಜಂಟಿ ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯನ್ನು ಒಗ್ಗೂಡಿಸಿ ಜಲಾನಯನ ಮಾದರಿಯಲ್ಲಿ ನೈಸರ್ಗಿಕ ಸಂಪನ್ಮೂಲ ಕಾಮಗಾರಿಗಳನ್ನು ಹಾಗೂ ಜಲಸಂಜೀವಿನಿ ಕಾರ್ಯಕ್ರಮವನ್ನು ಅನುಷ್ಠಾನಿಸುವ ಕುರಿತು.

**ಉಲ್ಲೇಖ:**

1. ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ: DO#J-11017/32/2017-RE-VII (e.358586), ದಿನಾಂಕ: 21-09-2022,
2. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವತಿಯಿಂದ ಪ್ರಕಟಿಸಿರುವ ಜಲಸಂಜೀವಿನಿ ಮಾರ್ಗಸೂಚಿ-2022, ದಿನಾಂಕ:
3. ದಿ:29-10-2022 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಗಳು.
4. ದಿ:07-11-2022 ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಹಾಗೂ ಅಭಿವೃದ್ಧಿ ಆಯುಕ್ತರು ಇವರ ಅಧ್ಯಕ್ಷತೆಯಲ್ಲಿ ನಡೆದ ಸಭಾ ನಡವಳಿಗಳು.

***********

ನೈಸರ್ಗಿಕ ಸಂಪನ್ಮೂಲಗಳಾದ ಮಣ್ಣು, ನೀರು, ಜೀವರಾಶಿ ಮತ್ತು ಸಸ್ಯವರ್ಗಗಳ ಸಂರಕ್ಷಣೆಯು ಪ್ರಸ್ತುತ ಹೆಚ್ಚು ಮಹತ್ವ ಪಡೆದುಕೊಂಡಿದೆ. ಕೆಲವು ಪ್ರದೇಶಗಳಲ್ಲಿ ತೀವ್ರವಾದ ಮಳೆ, ಅರಣ್ಯ ನಾಶಪಡಿಸುವಿಕೆ ಮತ್ತು ಅವೈಜ್ಞಾನಿಕವಾದ ಭೂ ಬಳಕೆ ಕ್ರಮಗಳಿಂದಾಗಿ ಭೂ ಸವಕಳಿಯ ಪರಿಣಾಮವು ಹೆಚ್ಚಾಗಿದೆ. ಇದರ ನೇರ ಪರಿಣಾಮ ಕೃಷಿ ಉತ್ಪನ್ನಗಳ ಉತ್ಪಾದಕತೆಗಳ ಮೇಲಾಗುತ್ತಿದೆ.

ಮಣ್ಣಿನ ಸವಕಳಿಯಿಂದ ಕೆಲವು ಪ್ರದೇಶಗಳು ಅನುತ್ಪಾದಕವಾಗಿದ್ದು, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು(SDG) ಸಾಧಿಸಲು ಇದರ ಸಂರಕ್ಷಣೆ ಒಂದು ಪ್ರಮುಖ ಸವಾಲಾಗಿದೆ. ವಿವಿಧ ಮಾದರಿಗಳ ಭೂ ಬಳಕೆ ಮತ್ತು ನಿರ್ವಹಣೆ ವಿಧಾನಗಳಿಂದ ಮಣ್ಣಿನ ಸವಕಳಿಯನ್ನು ತಡೆಯಬೇಕಾಗಿದೆ ಹಾಗೂ ಈಗಾಗಲೇ ಮಣ್ಣಿನ ಸವಕಳಿಯಿಂದ ಪಾಳುಬಿದ್ದಿರುವ ಪ್ರದೇಶಗಳನ್ನು ಪುನರುಜ್ಜೀವನಗೊಳಿಸಬೇಕಾಗಿದೆ. ಇದರಿಂದ ಈ ಪ್ರದೇಶಗಳಲ್ಲಿ ವಿವಿಧ ಭೂ ಬಳಕೆ ಅವಕಾಶಗಳನ್ನು ಕಲ್ಪಿಸುವುದಲ್ಲದೆ, ಜೀವವೈವಿಧ್ಯತೆ, ಜೀವನೋಪಾಯ ಚಟುವಟಿಕೆಗಳು, ಶುದ್ಧ ನೀರು ಒದಗಿಸುವುದರೊಂದಿಗೆ ಸವಕಳಿಗಳನ್ನು ತಡೆಯುತ್ತದೆ. ಇದರಿಂದ ಮಣ್ಣಿನ ಫಲವತ್ತತೆ ಹಾಗೂ ತೇವಾಂಶ ಹೆಚ್ಚಾಗುವುದಲ್ಲದೆ ಆಹಾರ ಪದಾರ್ಥಗಳ ಉತ್ಪಾದನೆಯು ಉತ್ತಮಗೊಳ್ಳುವುದು.

ಬೀಳುವ ಪ್ರತಿಯೊಂದು ಮಳೆ ನೀರಿನ ಹನಿಯನ್ನು ಕೊಯ್ಲು ಮಾಡಿ ಸಮರ್ಪಕವಾಗಿ ಬಳಸಬೇಕಾಗಿದೆ. ದಿಬ್ಬದಿಂದ ಕಣಿವೆಯತ್ತ ನೀರು ಚಲಿಸುವಾಗ ಮಣ್ಣು ಮತ್ತು ತೇವಾಂಶ, ಜೀವರಾಶಿ ಮತ್ತು ಅರಣ್ಯಗಳನ್ನು ಸಂರಕ್ಷಿಸಲು ಯೋಜನಾಬದ್ಧವಾಗಿ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವುದರಿಂದ ಸುಸ್ಥಿರ ಉತ್ಪಾದನೆ ಮತ್ತು ಪರಿಸರ ಸಮತೋಲನವನ್ನು ಕಾಪಾಡಬಹುದಾಗಿದೆ. ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಜಲಾನಯನ ಮಾದರಿಯಲ್ಲಿ

ದಿಬ್ಬದಿಂದ ಕಣಿವೆಯವರೆಗೆ ವಿವಿಧ ಉಪಚಾರಗಳ ಮೂಲಕ ಮಣ್ಣು ಸವಕಳಿಯನ್ನು ತಡೆಯುವುದರೊಂದಿಗೆ ಜಲಸಂರಕ್ಷಣೆ ಮಾಡಬಹುದಾಗಿರುತ್ತದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ನೈಸರ್ಗಿಕ ಸಂಪನ್ಮೂಲ ಕಾಮಗಾರಿಗಳಿಗಾಗಿ ಶೇ 65% ಮೀಸಲಿಡಲಾಗಿದೆ. ಈ ಹಿನ್ನೆಲೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿಯಲ್ಲಿ "**ಜಲ ಸಂಜೀವಿನಿ**" ಜಲಾನಯನ ಕಾರ್ಯಕ್ರಮವನ್ನು ರೂಪಿಸಲಾಗಿದೆ. ಇದರಲ್ಲಿ ಸರ್ಕಾರದ ವಿವಿಧ ಸಂಸ್ಥೆಗಳ ಸಹಯೋಗದೊಂದಿಗೆ, **ಜಿಯೋ-ಸ್ಪೇಷಿಯಲ್ ತಂತ್ರಜ್ಞಾನಗಳನ್ನು ಬಳಸಿಕೊಂಡು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕಾಮಗಾರಿಗಳನ್ನೊಳಗೊಂಡ ವಿವರವಾದ ವಿಸ್ತೃತ ಯೋಜನಾ ವರದಿ ಸಿದ್ಧಪಡಿಸಿ, ಕಾಮಗಾರಿಗಳನ್ನು ವಿವಿಧ ಹಂತಗಳಲ್ಲಿ ಅನುಷ್ಠಾನ ಮಾಡಲಾಗುವುದು**. ನೈಸರ್ಗಿಕ ಸಂರಕ್ಷಣೆಯ ಮೂಲಕ ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದು ಮತ್ತು ಪರಿಸರ ಸಮತೋಲನವನ್ನು ಕಾಪಾಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಜಲಾನಯನ ಚಟುವಟಿಕೆಗಳನ್ನು ಅನುಷ್ಠಾನಿಸುತ್ತಿರುವ ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ ಒಗ್ಗೂಡಿಸುವಿಕೆಯಡಿ ಸದರಿ ಕಾರ್ಯಕ್ರಮವನ್ನು ಅನುಷ್ಠಾನಿಸುವುದು ಇಂದಿನ ಅವಶ್ಯಕವಾಗಿದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆ ಮತ್ತು ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯನ್ನು ಒಗ್ಗೂಡಿಸಿ ಜಲಾನಯನ ಮಾದರಿಯಲ್ಲಿ ನೈಸರ್ಗಿಕ ಸಂಪನ್ಮೂಲ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಉಲ್ಲೇಖ(1)ರ ಪತ್ರದನ್ವಯ ನಿರ್ದೇಶನ ನೀಡಲಾಗಿದ್ದು, ಅದರಂತೆ ಉಲ್ಲೇಖ (3) ಮತ್ತು (4) ರ ನಡವಳಿಗಳನ್ವಯ ಜಲಸಂಜೀವಿನಿ ಯೋಜನೆಯ ಅನುಷ್ಠಾನದಲ್ಲಿ ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆ ಸಹಕಾರ ಒದಗಿಸಲು ಸೂಚಿಸಲಾಗಿರತ್ತದೆ. ಈ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಗಳ ಜಂಟಿ ಸಹಯೋಗದೊಂದಿಗೆ ಜಲಸಂಜೀವಿನಿ ಯೋಜನೆಯನ್ನು ಅನುಷ್ಠಾನಿಸಲು ತೀರ್ಮಾನಿಸಲಾಗಿರುತ್ತದೆ. ಅನುಷ್ಠಾನ ಇಲಾಖೆಗಳ ವಿವಿಧ ಜವಾಬ್ದಾರಿಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

### 1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

- ವಿವಿಧ ಅನುಷ್ಠಾನ ಇಲಾಖೆಗಳನ್ನು ಒಗ್ಗೂಡಿಸುವುದು ಮತ್ತು ಸಮನ್ವಯ ಸಾಧಿಸುವುದು.
- ತಾಲ್ಲೂಕಿನಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಗಳ ತಾಂತ್ರಿಕತೆ ಪರಿಣಿತಿಯನ್ನು ಬಳಸಿಕೊಂಡು ಹಾಗೂ ಅವರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಂಡು ವಿಸ್ತೃತ ಯೋಜನಾ ವರದಿಯನ್ನು (DPR) ಸಿದ್ಧಪಡಿಸುವುದು. (**GIS ಆಧಾರಿತ ದಿಬ್ಬದಿಂದ ಕಣಿವೆ (Ridge to Valley) ಪರಿಕಲ್ಪನೆ**ಯಲ್ಲಿ ತಯಾರಿಸುವುದು)
- ಜಲಸಂರಕ್ಷಣೆ ಪ್ರಚಾರದಲ್ಲಿ ಸಮುದಾಯವನ್ನು ಪ್ರೇರೇಪಿಸುವುದು ಮತ್ತು ಮುಂದಾಳತ್ವ ವಹಿಸುವುದು.
- ಅನುಷ್ಠಾನಕ್ಕೆ ಬೇಕಾದ ಎಲ್ಲಾ ಐಇಸಿ, ಅಗತ್ಯ ಪ್ರಚಾರ ಸಾಮಗ್ರಿ ಪರಿಕರಗಳನ್ನು ಒದಗಿಸುವುದು.
- ಗ್ರಾಮ ಪಂಚಾಯತಿವಾರು **GIS ಆಧಾರಿತ ದಿಬ್ಬದಿಂದ ಕಣಿವೆ** (Ridge to Valley) **ಪರಿಕಲ್ಪನೆ**ಯಲ್ಲಿ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸುವುದು ಮತ್ತು ನರೇಗಾ ಮಾರ್ಗಸೂಚಿಯನುಸಾರ ಪರಿಶೀಲಿಸಿ ಅನುಮೋದಿಸುವುದು.
- ಗ್ರಾಮ ಪಂಚಾಯತಿಯ ನೇತೃತ್ವದಲ್ಲಿ ವಿಸ್ತೃತ ಯೋಜನಾ ವರದಿಗಳನ್ನು ಸಿದ್ಧಪಡಿಸಲು, ಯೋಜನಾ ಪ್ರದೇಶದ ಎಲ್ಲಾ ಪಾಲುದಾರರ ಸಮುಖದಲ್ಲಿ ಗ್ರಾಮೀಣ ಸಹಭಾಗಿತ್ವ ಕಾರ್ಯಕ್ರಮ (PRA) ನಡೆಸಿ ಎಲ್ಲಾ ಚಟುವಟಿಕೆಗಳ ಬಗ್ಗೆ ಜನರಿಗೆ ತಾಂತ್ರಿಕವಾಗಿ ಮನವರಿಕೆ ಮಾಡಿಕೊಡುವುದು ಮತ್ತು ಸಾಮಾಜಿಕ ಒಪ್ಪಿಗೆ ಪಡೆಯುವುದು. ನಂತರ ನಿಯಾಮಾನುಸಾರ ಗ್ರಾಮ ಪಂಚಾಯತಿ ಅನುಮೋದನೆ ಪಡೆಯುವುದು.

- ಜಲಸಂಜೀವಿನಿ ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ಅವಶ್ಯಕ ಅನುದಾನ ನಿಗದಿಪಡಿಸಿಕೊಂಡು ಒದಗಿಸುವುದು.
- ಪ್ರತಿ ತಿಂಗಳು ತಾಲ್ಲೂಕು, ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಒಗ್ಗೂಡಿಸುವಿಕೆಯಡಿ ರೂಪಿಸಿರುವ ಕ್ರಿಯಾ ಯೋಜನೆಯ ಅನುಷ್ಠಾನದ ಪ್ರಗತಿ ಪರಿಶೀಲನೆ ಕೈಗೊಳ್ಳುವುದು ಹಾಗೂ ಮೇಲ್ವಿಚಾರಣೆ ಮಾಡುವುದು.
- ಯಶೋಗಾಥೆ ಮತ್ತು ಉತ್ತಮ ಮಾದರಿಯ ಡಿಜಿಟಲ್ ಸಂಗ್ರಹ ಹೊಂದುವುದು ಮತ್ತು ದಾಖಲಿಸುವುದು.

**2. ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆ.**

- ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಯು ತಾಂತ್ರಿಕ ಪರಿಣಿತ ಇಲಾಖೆಯಾಗಿರುವುದರಿಂದ ಜಲ ಸಂಜೀವಿನಿ ಕಾರ್ಯಕ್ರಮದ ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸುವಲ್ಲಿ ಸಂಪೂರ್ಣ ಸಹಕಾರ ಒದಗಿಸುವುದು.
- ಗ್ರಾಮ ಪಂಚಾಯತಿವಾರು ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಲು ಸಹಕರಿಸುವ ಎಲ್ಲಾ ಹಂತದ ಸಿಬ್ಬಂದಿ/ಅಧಿಕಾರಿಗಳಿಗೆ ಜಲಾನಯನ ಪರಿಕಲ್ಪನೆಯ ತರಬೇತಿ ನೀಡುವುದು.
- ಜಲಸಂಜೀವಿನಿ DPR ತಯಾರಿಕೆಯಲ್ಲಿ ಸಂಪೂರ್ಣವಾಗಿ ತೊಡಗಿಕೊಂಡು ನೈಸರ್ಗಿಕ ಸಂಪನ್ಮೂಲ ಚಟುವಟಿಕೆಗಳ ಅನುಷ್ಠಾನವನ್ನು ಯೋಜಿಸುವುದು ಹಾಗೂ ಉಸ್ತುವಾರಿ ಮಾಡುವುದು.
- ಗ್ರಾಮ ಪಂಚಾಯತಿಯ ನೇತೃತ್ವದಲ್ಲಿ ವಿಸ್ತೃತ ಯೋಜನಾ ವರದಿಗಳನ್ನು (DPR) ಯೋಜನಾ ಪ್ರದೇಶದ ಎಲ್ಲಾ ಪಾಲುದಾರರ ಸಮುಖದಲ್ಲಿ ಗ್ರಾಮೀಣ ಸಹಭಾಗಿತ್ವ ಕಾರ್ಯಕ್ರಮ (PRA) ನಡೆಸಿ ಎಲ್ಲಾ ಚಟುವಟಿಕೆಗಳ ಬಗ್ಗೆ ಜನರಿಗೆ ತಾಂತ್ರಿಕವಾಗಿ ಮನವರಿಕೆ ಮಾಡಿಕೊಡುವುದು ಮತ್ತು ಒಪ್ಪಿಗೆ ಪಡೆಯಲು ಸಹಕರಿಸುವುದು.
- ಜಲಸಂಜೀವಿನಿ ಕ್ರಿಯಾ ಯೋಜನೆಯೊಂದಿಗೆ ಇಲಾಖೆಯ ಯೋಜನೆಗಳೊಂದಿಗೆ (PMKSY-WDC 2.0, WDDP, RKVY, NMSA-RAD, ಇತರೆ) ಒಗ್ಗೂಡಿಸುವಿಕೆಯಡಿ ಕ್ರಿಯಾ ಯೋಜನೆ ರೂಪಿಸಿಕೊಂಡು ಉಲ್ಲೇಖ(1) ರ ಪತ್ರದಲ್ಲಿ ನಿರ್ದೇಶಿಸಿರುವಂತೆ ಅನುಷ್ಠಾನಗೊಳಿಸುವುದು.
- ಒಗ್ಗೂಡಿಸುವಿಕೆಯಡಿ ರೂಪಿಸಿರುವ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಅನುಷ್ಠಾನಗೊಳ್ಳುವಂತೆ ವಿವಿಧ ಹಂತದ ಇಲಾಖೆಯ ಅಧಿಕಾರಿಗಳು (ಸಕೃನಿ/ಉಕೃನಿ/ಜಕೃನಿ/ಆಯುಕ್ತರು/ನಿರ್ದೇಶಕರು ಜಆಇ) ಅನುಷ್ಠಾನದ ಪ್ರಗತಿ ಪರಿಶೀಲನೆ ಮತ್ತು ನಿರಂತರ ಮೇಲ್ವಿಚಾರಣೆಯನ್ನು ಕೈಗೊಳ್ಳುವುದು.
- ಇಲಾಖಾ ಹಂತದಲ್ಲಿ ಲಭ್ಯವಿರುವ ಭೂ ಸಂಪನ್ಮೂಲ ಸಮೀಕ್ಷೆ (Local Resource Inventory-LRI) ಮತ್ತು ಜಲಾನಯನಕ್ಕೆ ಸಂಬಂದಿಸಿದಂತೆ ಮಾಹಿತಿಯನ್ನು ನೀಡುವುದು ಹಾಗೂ ಜಲಾ ಆಯವ್ಯಯ ತಯಾರಿಕೆಗೆ ಸಹಕರಿಸುವುದು.
- ಯಶೋಗಾಥೆ ಮತ್ತು ಉತ್ತಮ ಮಾದರಿಯ ಡಿಜಿಟಲ್ ಸಂಗ್ರಹ ಹೊಂದುವುದು ಮತ್ತು ದಾಖಲಿಸುವುದು.

**ಅನುಷ್ಠಾನದ ಕ್ರಮಗಳು:**

ಗ್ರಾಮೀಣಾಭಿವೃದ್ಧಿ ಇಲಾಖೆ ಹಾಗೂ ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಯ ಜಂಟಿ ಸಹಯೋಗದೊಂದಿಗೆ ಜಲ ಸಂಜೀವಿನಿ ಯೋಜನೆಯನ್ನು ಅನುಷ್ಠಾನಗೊಳಿಸುವ ಹಂತದಲ್ಲಿ ಈ ಕೆಳಕಂಡಂತೆ ಕ್ರಮ ವಹಿಸುವುದು.

- ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಯ ಹೋಬಳಿ ಮಟ್ಟದ ಕೃಷಿ ಅಧಿಕಾರಿಗಳು ಜಲಾನಯನ ಪ್ರದೇಶ ಗುರುತಿಸುವುದು ಹಾಗೂ ತಾಂತ್ರಿಕವಾಗಿ ನೈಸರ್ಗಿಕ ಸಂಪನ್ಮೂಲ ಚಟುವಟಿಕೆಗಳನ್ನು ನಿರ್ಧರಿಸುವಲ್ಲಿ ಸಹಕರಿಸುವುದು.

- ಗ್ರಾಮ ಪಂಚಾಯತಿವಾರು ಎಲ್ಲಾ ಹಂತದ ಸಿಬ್ಬಂದಿ/ಅಧಿಕಾರಿಗಳಿಗೆ ಜಲಾನಯನ ಪರಿಕಲ್ಪನೆಯ ತರಬೇತಿ ನೀಡುವುದು.
- ಕೃಷಿ/ಜಲಾನಯನ ಅಭಿವೃದ್ಧಿ ಇಲಾಖೆಯ ವತಿಯಿಂದ ನೈಸರ್ಗಿಕ ಸಂಪನ್ಮೂಲ ಚಟಿವಟಿಕೆಗಳಿಗೆ ಸಂಬಂಧಿಸಿದಂತೆ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಾದ PMKSY-WDC 2.0, WDDP, RKVY, NMSA-RAD, REWARD ಗಳನ್ನು ಜಲಸಂಜೀವಿನಿ ಕ್ರಿಯಾ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನಿಸುವುದು.
- ಕಾಮಗಾರಿಗಳನ್ನು ಅನುಷ್ಠಾನಗೊಳಿಸುವಾಗ ವಿವಿಧ ಯೋಜನೆಗಳಲ್ಲಿ ಕಾರ್ಯಗತಗೊಳಿಸಿರುವ ಕಾಮಗಾರಿಗಳು ಪುನರಾವರ್ತನೆಯಾಗದಂತೆ ಖಾತರಿ ಪಡಿಸಿಕೊಳ್ಳುವುದು.
- ಒಂದು ಕಾಮಗಾರಿಯನ್ನು ಸಂಪೂರ್ಣವಾಗಿ ಒಂದು ಯೋಜನೆಯಲ್ಲಿ ಮಾತ್ರ ತೆಗದುಕೊಂಡು ಅನುಷ್ಠಾನಿಸುವುದು ಹಾಗೂ ಸಂಬಂಧಪಟ್ಟ ಕಾಮಗಾರಿಗಳ ಜಿಯೋಟ್ಯಾಗ್ ಫೋಟೋಗಳನ್ನು ಪ್ರತ್ಯೇಕವಾಗಿ ಸಂಬಂಧಿಸಿದ ಯೋಜನೆಗಳ ತಂತ್ರಾಂಶಗಳಲ್ಲಿ ಅರೋಹಿಸುವುದು.
- ಯೋಜನಾ ಚಟುವಟಿಕೆಗಳನ್ನು ಅನುಷ್ಠಾನಿಸುವ ಪೂರ್ವದಲ್ಲಿ ಈಗಾಗಲೇ ಕೃಷಿ ಇಲಾಖೆ/ಜಲಾನಯನ ಅಭಿವೃದ್ಧಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಉಪಚರಿಸಿದ ಪ್ರದೇಶಗಳಲ್ಲಿನ ಚಟುವಟಿಕೆಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು.

- ಎಲ್ಲಾ ಜಮೀನುಗಳನ್ನು ಪರಿವರ್ತನಾ ನಡಿಗೆ (Traverse Survey) ಮಾಡುವುದರ ಮೂಲಕ ಜಮೀನಿನಲ್ಲಿ ಹಾಲಿ ಸುಸ್ಥಿತಿಯಲ್ಲಿರುವ ರಚನೆಗಳು/ಅರಣ್ಯಸಸಿಗಳು/ತೋಟಗಾರಿಕೆ ಸಸಿಗಳು ಹಾಗೂ ನಿರ್ಮಿಸಬೇಕಾಗಿರುವ ರಚನೆಗಳು/ಅರಣ್ಯ ಸಸಿಗಳು/ತೋಟಗಾರಿಕೆ ಸಸಿಗಳನ್ನು ಪಟ್ಟಿ ಮಾಡುವುದು.
- ವಿಸ್ತೃತ ಯೋಜನಾ ವರದಿಯನ್ನು (DPR) ತಯಾರಿಸುವಾಗ MGNREGA ಅಡಿಯಲ್ಲಿ ಗುರುತಿಸಿರುವ ಚಟುವಟಿಕೆಗಳನ್ನು ಗ್ರಾಮ ಪಂಚಾಯತಿಯ **ಜಲಸಂಜೀವಿನಿ**ಕ್ರಿಯಾ ಯೋಜನೆ (Jalasanjeevini Action Plan) ತಯಾರಿಸಲು ಗ್ರಾಮಸ್ಥರಿಗೆ ಮನವರಿಕೆ ಮಾಡಿಕೊಡುವುದು
- ವೈಯಕ್ತಿಕ ಜಮೀನಿನಲ್ಲಿ ಫಲಾನುಭವಿ/ಸಮುದಾಯ ಭೂಮಿ/ಜಲವಾಹಿನಿವಾರು ನಿವ್ವಳ ಯೋಜನೆ ತಯಾರಿಸಿ ಅದನ್ನು ಈ ಕೆಳಗಿನಂತೆ ಕ್ರೋಢಿಕರಿಸುವುದು.

a. ಗ್ರಾಮ ಪಂಚಾಯತಿವಾರು ಕ್ರೋಢೀಕರಿಸುವುದು.
b. ಕಿರು ಜಲಾನಯನವಾರು ಕ್ರೋಢೀಕರಿಸುವುದು.
c. ಉಪ ಜಲಾನಯನವಾರು ಕ್ರೋಢೀಕರಿಸುವುದು.

- ಗ್ರಾಮ ಪಂಚಾಯತಿಯ ನೇತೃತ್ವದಲ್ಲಿ ಕ್ರಿಯಾ ಯೋಜನೆಯನ್ನು ಯೋಜನಾ ಪ್ರದೇಶದ ಎಲ್ಲಾ ಪಾಲುದಾರರ ಸಮ್ಮುಖದಲ್ಲಿ ಗ್ರಾಮೀಣ ಸಹಭಾಗತ್ವ ಕಾರ್ಯಕ್ರಮ (Participatory Rural Appraisal) ನಡೆಸಿ ಎಲ್ಲಾ ಚಟುವಟಿಕೆಗಳ ಬಗ್ಗೆ ಜನರಿಗೆ ಮನವರಿಗೆ ಮಾಡಿಕೊಡುವುದು. ಮತ್ತು ಅವರಿಂದ ಸಾಮಾಜಿಕ ಒಪ್ಪಿಗೆ ಪಡೆಯುವುದು. ಇದರ ನಂತರ ಗ್ರಾಮ ಪಂಚಾಯತಿಯ ಅನುಮೋದನೆಯನ್ನು ಸಹ ಪಡೆಯುವುದು.
- ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸಿದ ನಂತರ ಅನುಷ್ಠಾನಗೊಳಿಸುವ ಸಲುವಾಗಿ ದಿಬ್ಬದಿಂದ ಕಣಿವೆ (Ridge to Valley) ಪರಿಕಲ್ಪನೆಯಡಿ ಮುಂದಿನ 3 ವರ್ಷದಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು.
- ವರ್ಷಾವಾರು ಅನುದಾನವನ್ನು ನಿಗದಿಪಡಿಸಿಕೊಂಡು ಸದರಿ ಅನುದಾನವನ್ನು ಚಟುವಟಿಕೆ/ಘಟಕವಾರು ವಿಂಗಡಿಸಿಕೊಳ್ಳಬೇಕು. ಮೊದಲನೇ ವರ್ಷದಲ್ಲಿ ಮೇಲುಸ್ತರ ಪ್ರದೇಶವನ್ನು, ಎರಡನೇ ವರ್ಷದಲ್ಲಿ ಮಧ್ಯಸ್ತರ ಪ್ರದೇಶವನ್ನು ಮೂರನೇ ವರ್ಷದಲ್ಲಿ ಕೆಳಸ್ತರ ಪ್ರದೇಶವನ್ನು ಉಪಚರಿಸಲು ಕ್ರಿಯಾ ಯೋಜನೆಯನ್ನು ರೂಪಿಸುವುದು.

**ದಾಖಲೀಕರಣ:**

ಯೋಜನೆಯ ಪ್ರಾರಂಭಿಕ ಹಂತದಿಂದ ಮುಕ್ತಾಯ ಹಂತದ ವರೆಗೆ ವಿವಿಧ ಚಟುವಟಿಕೆಗಳನ್ನು ದಾಖಲಿಸುವುದು. ಯಶೋಗಾಥೆಗಳು, ಯೋಜನೆಯ ಪರಿಣಾಮಗಳ ವೀಡಿಯೊ ದಾಖಲೀಕರಣ ಮಾಡುವುದು ಮತ್ತು ಯೋಜನೆಯ ಅನುಷ್ಠಾನಕ್ಕೆ ಮೊದಲು ಮತ್ತು ನಂತರದ ಉಪಗ್ರಹ ಚಿತ್ರಗಳ /ಡ್ರೋನ್ ಸೇವೆಗಳ ಮೂಲಕ ಯೋಜನಾ ಪ್ರದೇಶದ ದಾಖಲೀಕರಣ ಮಾಡುವುದು. ಸದರಿ ಚಟುವಟಿಕೆಗಳಿಗೆ ತಗಲುವ ವೆಚ್ಚಗಳನ್ನು ನರೇಗಾ ಯೋಜನೆಯ IEC ಚಟುವಟಿಕೆಗಳಡಿ ಭರಿಸುವುದು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸರ್ಕಾರದ ಕಾರ್ಯದರ್ಶಿಗಳು,
ಕೃಷಿ ಇಲಾಖೆ.

**ಪ್ರತಿಯನ್ನು:**

**1.** ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
2. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
3. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ಗ್ರಾ.ಅ. & ಪಂ.ರಾಜ್ ಇಲಾಖೆ.
4. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ.
5. ರಾಜ್ಯ ಎಲ್ಲಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.
6. ರಾಜ್ಯದ ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರುಗಳಿಗೆ.